ಈ) ಅನ್ವಯಿಸುವುದಿಲ್ಲ.

ಹೊಸನಗರ ತಾಲ್ಲೂಕಿನ ಶ್ರೀ ಸಿದ್ದಲಿಂಗೇಶ್ವರ ಹುಲಿರಾಜ ಮೂಕಾಂಬಿಕ ದೇವಲಾಯ

593 (1198) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಜರಾಯಿ ಇಲಾಖೆಗೆ ಸೇರಿದ ಹೊಸನಗರ ತಾಲ್ಲೂಕಿನ ಕೊಡಚಾದ್ರಿ ಶ್ರೀ ಸಿದ್ಧಲಿಂಗೇಶ್ವರ ಹುಲಿರಾಜ ಮೂಕಾಂಬಿಕ ದೇವಾಲಯದಲ್ಲಿ 1998ರಲ್ಲಿ ವಿಗ್ರಹ ಕಳುವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಬಗ್ಗೆ ಏನು ಕ್ರಮ ಕೈಗೊಂಡಿದೆ;

ಆ) ಪ್ರಸಕ್ತ ಇರುವ ಅಧಿಕೃತ ಪ್ರಧಾನ ಮತ್ತು ಉಪ ಅರ್ಚಕರು ಯಾರು; ಇವರನ್ನು ಬದಲಾವಣೆ ಮಾಡುವ ಉದ್ದೇಶವಿದೆಯೆ;

ಇ) 1998ರಲ್ಲಿ ಈ ಅರ್ಚಕರಿಗೆ ತಸ್ತೀಕ್ ಸಂಬಳ ನೀಡುವಂತೆ ರಾಜ್ಯದ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಇದುವರೆಗೆ ಹಣ ಪಾವತಿ ಮಾಡದಿರಲು ಕಾರಣವೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಹೌದು ಬಂದಿದೆ. ದೇವಾಲಯದಲ್ಲಿ ಶ್ರೀ ಹುಲಿರಾಯ ಪ್ರತಿಮೆಯನ್ನು ದುಷ್ಕರ್ಮಿಗಳು ಕಿತ್ತು ಹಾಕಿದ್ದು, ಇದಕ್ಕೆ ಪುನಃ ಪುನರ್ ಪ್ರತಿಷ್ಠಾಪನೆ ಮಾಡಲಾಗಿದೆ ಹಾಗೂ ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದು, ಹೊಸನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್. ಕ್ರೈಮ್ ನಂ. 33/99 ದಾಖಲಾಗಿ, ಜೆ.ಎಂ.ಎಸ್.ಸಿ ನ್ಯಾಯಾಲಯದಲ್ಲಿ ಸಿಆರ್‌ನಂ. 53/98 ಪ್ರಕರಣ ನಡೆಯುತ್ತಿದ್ದು, ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ಆ) ಪ್ರಸ್ತುತ ನಾರಾಯಣ ಜೋಷಿ ಪ್ರಧಾನ ಅರ್ಚಕರಾಗಿ ಶ್ರೀ ನಾಗೇಶ್ ಇವರು ಸಹಾಯಕ ಅರ್ಚಕರಾಗಿ ಕಾರ್ಯ ನಿರ್ವಹಿಸುತ್ತಿರುವರು ಸದ್ಯಕ್ಕೆ ಅರ್ಚಕರ ಬದಲಾವಣೆ ಮಾಡುವ ಉದ್ದೇಶವಿಲ್ಲ.

ಇ) ಅರ್ಚಕರಿಗೆ ಹಣ ಪಾವತಿ ಮಾಡುವ ವಿಚಾರದಲ್ಲಿ ಓಚರ್‌ಗಳನ್ನು ಹಾಜರು ಪಡಿಸಲು ತಹಶೀಲ್ದಾರ್ ಹೊಸನಗರ ಇವರು ತಿಳುವಳಿಕೆ ಪತ್ರ ನೀಡಿದ್ದು, ಸದರಿಯವರು ಓಚರ್‌ಗಳನ್ನು ಸಲ್ಲಿಸಿಲ್ಲವಾದ್ದರಿಂದ ಓಚರ್ ಸಲ್ಲಿಸಿದ ನಂತರ ಹಣ ಪಾವತಿಸಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

594 (1185) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯಲ್ಲಿ ಪ್ರವಾಸೋದ್ಯಮದ ದೃಷ್ಟಿಯಿಂದ ಗುರುತಿಸಲಾದ ಯಾತ್ರಾ ಸ್ಥಳಗಳು, ಪ್ರವಾಸೀ ಕೇಂದ್ರಗಳು ಹಾಗೂ ಪ್ರವಾಸಿ ತಾಣಗಳಾವುವು?

ಆ) ಅವುಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಬಿ. ಇನಾಂದಾರ್, (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಮಂಡ್ಯ, ಮೇಲುಕೋಟೆ, ಶಿವನಸಮುದ್ರ, ಕೆ.ಆರ್.ಎಸ್. ಕೊಕ್ಕರೆ ಬೆಳ್ಳೂರು ಹನುಮಂತನಗರ, ದೊಡ್ಡಮಾಕಳಿ, ಭೀಮೇಶ್ವರಿ, ಶ್ರೀರಂಗಪಟ್ಟಣ ಹಾಗೂ ಮದ್ದೂರು.